ಜನಾರೋಗ್ಯ—ದಾವಣಗೆರೆ ಟೌನು ಇತರ ಸ್ಥಳಗಳಲ್ಲಿ ಜನಾರೋಗ್ಯವು ಚೆನ್ನಾಗಿದೆ. ಪರಂತು ದಾವಣಗೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವುಖಾಲೆಜ್‌ಲಾಬು ಸ್ವಲ್ಪಮಟ್ಟಿಗೆ ವ್ಯಾಪಿಸಿಯಿದೆ.

ಜಮ್ಮಿ—ಈ ಮೊಹಿಯಲ್ಲಿ 70—4—0 ಕಂದಾಯವುಳ್ಳ ಜಮ್ಮಿ ಸಾಗುವಳಿ ಬಗ್ಗೆ ತೆಗದುಕೊಳ್ಳಲ್ಪಟ್ಟಿದೆ.

ದಾರಣೆ—ಯಥಾಸ್ಥಿತವಾಗಿದೆ.

ಸೈಯದ್ ನಸೀರುದ್ದೀನ್,
ಛಾರ್ಜ್ ಪೆಪ್ಯುಟಿ ಕಮ್ಮಿಷನರ್.

---

## ಕಡೂರು ಡಿಸ್ಟ್ರಿಕ್ಟ್.

ಮಳೆ—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಈ ಮೊಹಿಯೊಳಗೆ ಇವರವಿ ಕಂತೆ ಮಳೆ ಆಗಿಯಿದೆ:—

| ತಾಲ್ಲೂಕುಗಳು. | ಇಂ. | ಸೆಂ. | ತಾಲ್ಲೂಕುಗಳು | ಇಂ. | ಸೆಂ. |
|---|---|---|---|---|---|
| ತರೀಕೆರೆ .. | 0 | 65 | ಹಾಸನ .. | 0 | 20 |
| ಕೊಪ್ಪ .. | 0 | 40 | ಮಂಜರಾಬಾದ್ .. | 0 | 0 |
| ಚಿಕ್ಕಮಗಳೂರು .. | 0 | 66 | ಬೇಲೂರು .. | 0 | 20 |
| ಕಡೂರು .. | 1 | 50 | ಅರಸೀಕೆರೆ .. | 0 | 21¼ |
| ಮೂಡಿಗೆರೆ .. | 0 | 0 | ಎಸಳ್ಳಿ .. | 1 | 50 |

ಬೇರುವಾದ ಧಾನ್ಯಗಳು—ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಬ್ಬು, ಕಡೂರು ಮತ್ತು ಮಂಜರಾಬಾದ್ ತಾಲ್ಲೂಕುಗಳಲ್ಲಿ ವೈಶಾಖೀ ಭತ್ತ, ಹಾಸನ ತಾಲ್ಲೂಕಿನಲ್ಲಿ ಕಡಲೆ.

ಕಟುವಾದ ಫಸಲು—ತರೀಕೆರೆ, ಚಿಕ್ಕಮಗಳೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ಭತ್ತ, ರಾಗಿ, ತಮಾಂ ಮಲೆನಾಡು ತಾಲ್ಲೂಕುಗಳಲ್ಲಿ ಭತ್ತ ಮತ್ತು ಕಡೂರು ವ ಅರಸೀಕೆರೆ ತಾಲ್ಲೂಕುಗಳಲ್ಲಿ ಕಾಫಿ, ಅಡಿಕೆ, ರಾಗಿ, ಮೆಣಸಿನಕಾಯಿ ವಗೈರೆ.

ಫಸಲ್‌ಸ್ಥಿತಿ—ಪ್ರಾಯಶಃ ಚೆನ್ನಾಗಿ ಯಿದೆ.

ಕಾಲಸ್ಥಿತಿ—ಮಲೆನಾಡಿನಲ್ಲಿ ಚೆನ್ನಾಗಿಯಿದೆ. ಪರಂತು ಮೈದಾನದಲ್ಲಿ ಅಷ್ಟು ಚೆನ್ನಾಗಿಯಿಲ್ಲ.

ಜನಾರೋಗ್ಯ—ಸಮ್ಯಸ್ಥವಾಗಿದೆ. ಹಾಸನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜ್ವರ, ಛಳಿ, ತರೀಕೆರೆಯಲ್ಲಿ ಕೆಮ್ಮು ನಷ ವ್ಯಾಪಿಸಿ ಇದೆ.

ಕಾಲಸಡೆ—ಸಾಧಾರಣವಾಗಿ ವಳ್ಳಿ ಸ್ಥಿತಿಯಲ್ಲಿ ಯಿದೆ. ಹಾಸನ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜ್ವರ ಮತ್ತು ಬಾಯಿರೋಗಗಳು ವ್ಯಾಪಿಸಿ ಇರುವಂತೆ ರಿಪೋರ್ಟಾಗಿರುತ್ತೆ. ಕಳೆದ ತಿಂಗಳಲ್ಲಿ 975 ಕಾಲ್ನಡಿಗೆಗಳೂ ಈ ತಿಂಗಳಲ್ಲಿ 762 ಕಾಲ್ನಡಿಗೆಗಳೂ ಹೋಗಿರುತ್ತವೆ.

ಜಮ್ಮಿ—ಸಾಗುವಳಿ ಬಗ್ಗೆ 1,011—8—0 ರೂಪಾಯಿ ಕಂದಾಯ ಬಾಳುವ ಜಮೀನು ತೆಗದುಕೊಳ್ಳಲ್ಪಟ್ಟಿದೆಂತೆ ರಿಪೋರ್ಟಾಗಿರುತ್ತೆ. ರಾಜೀನಾಮೆ ಯಾವದೂ ಇಲ್ಲವೆ.

ದಾರಣೆ—ಇತರ ಡಿಸ್ಟ್ರಿಕ್ಟುಗಳಿಗೆ ಜಿನಸಿಗಳು ವಿಶೇಷವಾಗಿ ಭರ್ತಿಯಾಗುವದರಿಂದ ದಾರಣೆ ಚಡಾಯಿಸುವ ಹಸಲು ಇದೆ.

ಮಹಮ್ಮದಬ್ಲೀ, ಕೆ. ಬಿ.,
ಆಕ್ಟಿ|| ಕಮ್ಮಿಷನರ್.

---

## ಕೊಡಗು.

### ನೋಟೀಸುಗಳು.

ತಾರೀಖು 4ನೇ ಡಿಸಂಬರ್ ಸ್ಯ 1884.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ, ಸ್ಯ 1885ನೇ ಜನವರೀ ತಾರೀಖು 1ರಿಂದ ಕೊಡಗು ಛಾರೆಸ್ಟುಗಳಲ್ಲಿ ಬಿದರುಗಳನ್ನು ವಂಶುಸಾವಿರಕ್ಕೆ 7—8—0 ವೇರೆ ಮಾರುತ್ತೇವೆ.

ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫೈಜರ್‌ವೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲಿ ಇರುವ ಛಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳ ತಕ್ಕದ್ದಿದೆ.

ತ್ಯಾಗ .. .. 400 ನಾಟಾಗಳು. | ಹೊನ್ನೆ .. .. 200 ನಾಟಾಗಳು

ನಿಬಂಧನೆ—ಸ॥ 1873ನೇ ಇಸವಿ ಮೈಸೂರು ಗೆಜೆಟ್ಟನಲ್ಲಿ ಪಾಯಿಪ್ ಮಾಡೋಣಾದ ಜೂ॥ ತಾರೀಖು 12ನೇ ನಂಬರು 20ನೇ ನೋಟಿಫಿಕೇಷ॥ ಮೇರೆ.

---

ತಾರೀಖು 14ನೇ ಜನವರೀ ಸ॥ 1885.

ಕೊಡಗು ಫಾರೆಸ್ಟ್ ಇಲಾಖೆಯ ಬಾಬತು ಹುಣಸೂರು ಡಿಪೋದಲ್ಲಿರುವ ಈ ಕೆಳಗೆ ನಮೂದು ಮಾಡಿದ ನಾಟಾಗಳನ್ನು ಇದೇ ಇಸವಿ ಫಿಬ್ರವರೀ ತಾರೀಖು 10ನೇ ದಿನ ಹುಣಸೂರಲ್ಲಿ ಬಹಿರಂಗವಾದ ಹರಾಜು ಮಾಡುತ್ತೇವೆ.

ಎಫ್. ಬಿ. ಡಿರ್ಕೆಸ್,
ಡೆಪ್ಯೂಟೀ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

---

ತಾರೀಖು 6ನೇ ಡಿಸೆಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ॥ 1885ನೇ ಇಸವಿ ಫೆಬ್ರವರಿ ಗುರ್ತೇ ತಾರೀಖು ಲಾಗಾಯಿತು ಜೂ॥ 30ನೇ ತಾರೀಖುವರಿಗೆ ಇದರಡಿ ಕಂಡ ಪ್ಲಾಂಟೇಷ॥ಗಳು ಬೇಟಗೇ ಕಾಲಕ್ಕೊಸ್ಕರ ಮುಚ್ಚಲ್ಪಡುತವೆ. ಬೇಟೆಗಾರರು ಪ್ಲಾಂಟೇಷ॥ಗಳ ಚಾರ್ಜಿನಲ್ಲಿರುವ ಫಾರೆಸ್ಟ್ಸ್ ಆಫೀಸರ್ಸ್‌ಯವರ ವಿಶೇಷ ಆಪ್ಪಣೆವಾಯಿ ಸದರೀ ಪ್ಲಾಂಟೇಷ॥ಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ.

| ಪ್ಲಾಂಟೇಷ॥ಗಳು. | | ತಾಲ್ಲೂಕು. |
|---|---|---|
| ಕಾಡಗೋಡಿ | | ಹೊಸಕೋಟೆ |
| ಜಡಿಗೇನಹಳ್ಳಿ | (ಹಳೇದು ಮತ್ತು ಹೊಸದು) | ಡಿಟೋ |
| ನೆಲಾಲ್ | (A. B. ಮ C.) | ಡಿಟೋ |
| ತಟ್ಟೂರು | | ಡಿಟೋ |
| ತಿಂಡಲ್ | | ಹೊಸಕೋಟೆ ಮತ್ತು ಮಾಲೂರು |
| ಅಪ್ಪಸಂದ್ರ | | ಡಿಟೋ |
| ದೊಡ್ಡಹರಡಿ | | ಹೊಸಕೋಟೆ ಮತ್ತು ಜಿಲ್ಲಫಟ್ಟು |
| ಚಿಕ್ಕಹರಡಿ | | ಡಿಟೋ |
| ರಾಮಚಂದ್ರಾಪುರ | | ಮಾಲೂರು |
| ಮೂರಸಂದ್ರ | | ಮೂಲೂರು |
| ಕುರಂಡಹಳ್ಳಿ | (ಹಳೇದು ಮತ್ತು ಹೊಸದು) | ಡಿಟೋ |
| ಜಂಗಮಕೋಟಿ | | ಜಿಲ್ಲಫಟ್ಟು |
| ಈನೂರು | | ಬೆಂಗಳೂರು |

---

ತಾರೀಖು 7ನೇ ಜನವರಿ 1885.

ಕಾಡುಗೋಡಿ ಪ್ಲಾಂಟೇಷ॥ನಲ್ಲಿ ಹಾಲೀ ಇರತಕ್ಕ ಸುಮಾರು 2,500 ಬಣಗಿದ ಕೇಸರೀನಾ ಮರಗಳನ್ನು ಮಾಹೇವಜಕೂರ್ 20ನೇ ತಾರೀಕ ಮಂಗಳವಾರದ ದಿನ ಸದರೀ ಜಾಗಾದಲ್ಲಿ ಫಾರೆಸ್ಟ್ ಆರ್ಫೀಸರ್ ಯವರು, ಹೊಸಕೋಟೆ ತಾಲ್ಲೂಕು ಅಮಲ್ದಾರ್ರೊಜನೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುವರು.

ಯಸ್. ವಿ. ಬಾಪೂರಾವ್,
ಫಾರೆಸ್ಟ್ ಆರ್ಫೀಸರ್ ಇನ್ ಚಾರ್ಜ್ ಪ್ಲಾಂಟೇಷ॥ಸ್.

---